**ಕರ್ನಾಟಕ ಸರ್ಕಾರ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.2835/2022**

ಪಿ.ಡಬ್ಲ್ಯೂ: 3

ಸಿ.ಡಬ್ಲ್ಯೂ: 8

ಸಾಕ್ಷಿದಾರರ **ಹೆಸರು** : ಪಾತಲಿಂಗ

ತಂದೆ **ಹೆಸರು** : ಕೊಡಲಪ್ಪ

**ವಯಸ್ಸು** : **28 ವರ್ಷ**

**ಉದ್ಯೋಗ** : ಕೂಲಿ ಕೆಲಸ

**ವಾಸಸ್ಥಳ** : ನಂದಿಹೊಸಳ್ಳಿ ಗ್ರಾಮ

**ದಿನಾಂಕ: 23-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಆರೋಪಿತರು ನಮಗೆ ಪರಿಚಯಸ್ಥರು. ಆರೋಪಿತರು ಚಾಸಾ-1 ರವರಿಗೆ ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಆರೋಪಿತರು ಚಾಸಾ-1 ಮತ್ತು ನನಗೆ ಯಾವುದೇ ರೀತಿಯ ಹಲ್ಲೆ ಮಾಡಿರುವುದಿಲ್ಲ, 2 ರಿಂದ 4 ನೇ ಆರೋಪಿತರು ನನಗೂ ಹಾಗೂ ಚಾಸಾ-1, 10 ರಿಂದ 12 ರವರಿಗೆ ಯಾವುದೇ ಕೊಲೆ ಬೆದರಿಕೆ ಹಾಕಿರುವುದಿಲ್ಲ. ಈ ಪ್ರಕರಣದ ಸಂಬಂಧ ಬೇರೆ ಏನೂ ಗೊತ್ತಿರುವುದಿಲ್ಲ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: 14-09-2021 ರಂದು ಸಂಜೆ 7-00 ಗಂಟೆ ಸಮಯದಲ್ಲಿ ಲಿಂಗದಹಳ್ಳಿಯ ನಂದಿಹೊಸಳ್ಳಿ ಗ್ರಾಮದಲ್ಲಿ ಗಣಪತಿ ವಿಸರ್ಜನೆ ಮಾಡುವ ವಿಚಾರದಲ್ಲಿ ಭಗವತಿ ಕಟ್ಟೆಯ ಹತ್ತಿರ ತರೀಕೆರೆ ಕಡೆಯಿಂದ ಕೆಎ 66/1726 ಟಾಟ ಎಸ್ ವಾಹನದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಬಂದು ನನಗೂ, ಚಾಸಾ-1 ಮತ್ತು ಚಾಸಾ-9, 10 ರಿಂದ 12 ರವರನ್ನು ಅಡ್ಡಗಟ್ಟಿ ನಿಲ್ಲಿಸಿರುತ್ತಾರೆಂದರೆ ಸರಿಯಲ್ಲ. 1 ನೇ ಆರೋಪಿಯು ಚಾಸಾ-1 ರವರಿಗೆ ಅವರ ನೆಚ್ಚಿನ ನಟನಾದ ಸುದೀಪ್ ರವರ ಬಗ್ಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತಾರೆಂದರೆ ಸರಿಯಲ್ಲ. 1 ನೇ ಆರೋಪಿಯು

ಚಾಸಾ-1 ರವರ  ಕೊರಳುಪಟ್ಟಿ ಹಿಡಿದು ಎಳೆದಾಡಿ ಒಂದು ಕಬ್ಬಿಣದ ಮಚ್ಚಿನಿಂದ ಹೊಡೆದು, ರಕ್ತಗಾಯ ಮಾಡಿರುತ್ತಾರೆಂದರೆ ಸರಿಯಲ್ಲ. ಜಗಳವನ್ನು ಬಿಡಿಸಲು ಬಂದ ನನಗೆ 2 ನೇ ಆರೋಪಿಯ ಕೈಯಲ್ಲಿದ್ದ ಮಚ್ಚನ್ನು ಕಿತ್ತುಕೊಂಡು ಹೊಡೆದು ನನ್ನ ಎದೆಗೆ, ಕೈಗೆ ಪೆಟ್ಟಾಗಿ ರಕ್ತಗಾಯವಾಗಿ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿತರು ನನಗೆ  ಕೈಯಿಂದ ಮೈ ಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತಾರೆಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿತರು ನನಗೂ ಮತ್ತು ಚಾಸಾ-1, 9 ರಿಂದ 11 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ.

ಆರೋಪಿಯು ನ್ಯಾಯಾಲಯದ ಮುಂದೆ ಇರುವ ಹಿಡಿಗಾತ್ರದ ಕಬ್ಬಿಣದ ಮಚ್ಚನ್ನು ನೋಡಿ ಗುರುತಿಸಿರುವುದಿಲ್ಲ.

ದಿನಾಂಕಃ 15-09-2021 ರಂದು - - -  - - ಎಂದು ಪುನಃ ನೋಡಿದರೆ ಗುರುತಿಸುತ್ತೇನೆಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗೆಳೆದ ಹೇಳಿಕೆ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು.

ನಾವು ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಾವು ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡ ಕಾರಣ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ  ವಕೀಲರಿಂದ.**

ಪಾಟೀ ಸವಾಲು ಇರುವುದಿಲ್ಲ

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**